**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001**

**ಸಂಖ್ಯೆ : ಇ-ಆಡಳಿತ ಅಧಿ.ಸೇ.ಮಾ 01/2020-21** **ದಿನಾಂಕ : 12-05-2020**

## ಸುತ್ತೋಲೆ

ವಿಷಯ: ಅಧಿಕಾರಿಗಳ ಸೇವಾ ಮಾಹಿತಿ ತಂತ್ರಾಂಶ ಹಾಗೂ ಬೋಧಕೇತರ ನೌಕರರ ಸೇವಾ ಮಾಹಿತಿ ತಂತ್ರಾಂಶದಲ್ಲಿ ಅಳವಡಿಸಿರುವ ಸೇವಾ ಮಾಹಿತಿಯನ್ನು ಪರಿಶೀಲಿಸಿಕೊಂಡು ಇಂದೀಕರಿಸುವ **(update)** ಬಗ್ಗೆ.

ಉಲ್ಲೇಖ: ಈ ಕಛೇರಿಯ ಜ್ಞಾಪನ ಸಂಖ್ಯೆ: ಇ-ಆಡಳಿತ/ಅಧಿ.ಸೇ.ಮಾಹಿತಿ:01/2018-19 ದಿನಾಂಕ: 11-12-2018, ಸಂಖ್ಯೆ: ಇ-ಆಡಳಿತ/ಅಧಿ.ಸೇ.ಮಾಹಿತಿ:02/2018-19 ದಿನಾಂಕ: 05-01-2019, ಸಂಖ್ಯೆ : ಇ-ಆಡಳಿತ ಅಧಿ.ಸೇ.ಮಾ 03/2019-20 ದಿನಾಂಕ : 13-01-2020 ಹಾಗೂ ಸಂಖ್ಯೆ : ಇ-ಆಡಳಿತ ಬೋಸೇಮಾ 02/2019-20 ದಿನಾಂಕ : 13-01-2020

**********

ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಹಾಗೂ ಬೋಧಕೇತರ ನೌಕರರ ಸೇವಾ ಮಾಹಿತಿಯನ್ನು ಅಧಿಕಾರಿಗಳ ಸೇವಾ ಮಾಹಿತಿ ತಂತ್ರಾಂಶ ಹಾಗೂ ಬೋಧಕೇತರ ನೌಕರರ ಸೇವಾ ಮಾಹಿತಿ ತಂತ್ರಾಂಶದಲ್ಲಿ ಆಯಾ ಜಿಲ್ಲಾ ಲಾಗಿನ್‌ನಲ್ಲಿ ಮಾಹಿತಿಯನ್ನು ಅಳವಡಿಸಲಾಗಿರುತ್ತದೆ. ಆದರೆ ಮಾಹಿತಿ ಅಳವಡಿಸಿದ ನಂತರ ಅಧಿಕಾರಿಗಳು ಮತ್ತು ಸಿಬ್ಬಂದಿಯ ವರ್ಗಾವಣೆ ಮತ್ತು ಬಡ್ತಿ ಮೂಲಕ ಸ್ಥಳ ಬದಲಾವಣೆ ಆಗಿರುತ್ತದೆ ಹಾಗೂ ಹಲವಾರು ಬೋಧಕೇತರ ನೌಕರರು ಹೊಸದಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಆದರೆ ಇಂತಹ ಸ್ಥಳ ಬದಲಾವಣೆ ಹಾಗೂ ಹೊಸ ನೌಕರರ ಮಾಹಿತಿಯನ್ನು ತಂತ್ರಾಂಶದಲ್ಲಿ ತಕ್ಷಣವೇ ಇಂದೀಕರಿಸದಿರುವುದನ್ನು ಗಂಭೀರವಾಗಿ ಪರಿಗಣಿಸಿದೆ.

ತಂತ್ರಾಂಶದಲ್ಲಿ ಅಳವಡಿಸಿದ ಮಾಹಿತಿಯನ್ನು ಇಲಾಖೆಯ ವಿವಿಧ ಯೋಜನೆಗಳಿಗೆ ಬಳಸಿಕೊಳ್ಳುತ್ತಿರುವುದರಿಂದ ಹಾಗೂ ಸಿಬ್ಬಂದಿಗೆ ನೀಡಲಾಗುತ್ತಿರುವ ಆನ್ ಲೈನ್ ಸೇವೆಗಳಿಗೂ ಬಳಸಿಕೊಳ್ಳಲಾಗುತ್ತಿರುವುದರಿಂದ ತಕ್ಷಣವೇ ಬಡ್ತಿ/ವರ್ಗಾವಣೆ ಹೊಂದಿದ ಅಧಿಕಾರಿಗಳು/ಬೋಧಕೇತರ ಸಿಬ್ಬಂದಿಯ ಹಾಗೂ ಹೊಸದಾಗಿ ನೇಮಕಾತಿ ಹೊಂದಿದ ಸಿಬ್ಬಂದಿಯ ಮಾಹಿತಿಯನ್ನು ದಿನಾಂಕ: 16-05-2020 ರೊಳಗೆ ಆಯಾ ತಂತ್ರಾಂಶಗಳಲ್ಲಿ ಇಂದೀಕರಿಸಲು ತಿಳಿಸಿದೆ. ಯಾವುದೇ ಅಧಿಕಾರಿ/ಸಿಬ್ಬಂದಿಯ ಮಾಹಿತಿ ಅಪೂರ್ಣವಿದ್ದಲ್ಲಿ ಅಥವಾ ತಪ್ಪುಗಳಿದ್ದಲ್ಲಿ ಅಂತಹ ಮಾಹಿತಿಯನ್ನೂ ಸಹ ಪರಿಶೀಲಿಸಿ ಇಂದೀಕರಿಸಲು ತಿಳಿಸಿದೆ. ಸಂಬಂಧಿಸಿದಂತೆ ಹಿಂದಿನ ಸುತ್ತೋಲೆಗಳು, ಕೈಪಿಡಿಗಳು ಇಲಾಖಾ ವೆಬ್ ಸೈಟಿನಲ್ಲಿ ಲಭ್ಯವಿದ್ದು ಅವುಗಳನ್ನು ಪರಿಶೀಲಿಸಿ ಅದರಂತೆ ಕ್ರಮ ಕೈಗೊಳ್ಳಲು ತಿಳಿಸಿದೆ.

ರಾಜ್ಯ ಹಂತದ ಕಛೇರಿಗಳು, ವಿಭಾಗ ಹಂತದ ಕಛೇರಿಗಳು, ಜಿಲ್ಲಾ ಹಂತದ, ತಾಲ್ಲೂಕು ಹಂತದ ಮಾಹಿತಿಯನ್ನು ಅಳವಡಿಸಲು ಮೇಲುಸ್ತುವಾರಿ ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿಯನ್ನು ಆಯಾ ಕಛೇರಿಯ ಪತ್ರಾಂಕಿತ ಅಧಿಕಾರಿಯನ್ನು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಯ ವ್ಯವಸ್ಥಾಪಕರನ್ನು ನೋಡಲ್ ಅಧಿಕಾರಿಯನ್ನಾಗಿ ಈಗಾಗಲೇ ನೇಮಿಸಲಾಗಿದೆ. ಆದ್ದರಿಂದ ನಿಮ್ಮ ಕಛೇರಿಯ ವ್ಯಾಪ್ತಿಯಲ್ಲಿ ಕರ್ತವ್ಯನಿರ್ವಹಿಸುವ ಎಲ್ಲಾ ಅಧಿಕಾರಿಗಳ ಹಾಗೂ ಬೋಧಕೇತರ

ನೌಕರರ ಸೇವಾ ಮಾಹಿತಿ ತಂತ್ರಾಂಶದಲ್ಲಿ ಅಳವಡಿಸಲು/ ಪರಿಶೀಲಿಸಲು ಕ್ರಮ ವಹಿಸಲು ಸೂಚಿಸಲಾಗಿದೆ. ಪ್ರಸ್ತುತ ತಂತ್ರಾಂಶದಲ್ಲಿ ಲಭ್ಯವಿರುವಂತೆ ಜಿಲ್ಲಾವಾರು ಅಧಿಕಾರಿಗಳ ಹಾಗೂ ಬೋಧಕೇತರ ಸಿಬ್ಬಂದಿಯ ಪಟ್ಟಿಯನ್ನು ಈ ಪತ್ರದೊಂದಿಗೆ ಲಗ್ತತ್ತಿಸಲಾಗಿದೆ. ಈ ಬಗ್ಗೆ ಯಾವುದೇ ಸ್ಪಷ್ಟೀಕರಣ ಅಗತ್ಯವಿದ್ದಲ್ಲಿ ಇ–ಮೇಲ್ ವಿಳಾಸ tdsegov@gmail.comಗೆ ಮೇಲ್ ಮಾಡಿ ಮಾಹಿತಿ ಪಡೆಯವುದು.

ಜಂಟಿ ನಿರ್ದೇಶಕರು (ಆಡಳಿತ)
ಆಯುಕ್ತರ ಕಛೇರಿ, ಬೆಂಗಳೂರು

ಪ್ರತಿಯನ್ನು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
2. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ
3. ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
4. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು
5. ನಿರ್ದೇಶಕರು, ಕ.ಪ್ರೌ.ಶಿ.ಪ.ಮಂಡಳಿ, ಬೆಂಗಳೂರು
6. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು
8. ನಿರ್ದೇಶಕರು, ಸಿಸ್ಲೆಪ್, ಧಾರವಾಡ
9. ವಿಶೇಷಾಧಿಕಾರಿಗಳು ಹಾಗೂ ವಿಭಾಗೀಯ ಸಹನಿರ್ದೇಶಕರು, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು
10. ವಿಭಾಗೀಯ ಸಹನಿರ್ದೇಶಕರು, ಮೈಸೂರು ವಿಭಾಗ/ ಬೆಳಗಾಂ ವಿಭಾಗ/ ಕುಲ್ಬುರ್ಗಿ ವಿಭಾಗ
11. ಸಹನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು
12. ಪ್ರಾಂಶುಪಾಲರು, ರಾಜ್ಯದ ಎಲ್ಲಾ ಸಿಟಿಇ ಗಳು
13. ಉಪನಿರ್ದೇಶಕರು, ಟಿಬಿಎಫ್
14. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ)
15. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ)
16. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು